ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು-560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 06.10.2017

ಬೆಂಗಳೂರು ನಗರ (ಜಿಲ್ಲೆಗೆ ಸೀಮಿತವಾಗಿದೆ.

ಈ ವಾರದ ಹವಾಮಾನ ಮುನ್ಸೂಚನೆ(ಭಾರತೀಯ ಹವಾಮಾನ ಇಲಾಖೆ)

(ದಿನಾಂಕ 07-10-2017 to 11-10-2017 ವರೆಗೆ)

ನಿಯತಾಂಕಗಳು	07.10.17	08.10.17	09.10.17	10.10.17	11.10.17
ಮಳೆ (ಮಿ ಮಿ)	35	35	25	20	12
ಗರಿಷ್ಠ ಉಷ್ಣಾಂಶ(ಡಿ.ಸೆ.)	28	29	29	28	29
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	20	20	20
ಮೋಡ (ಪ್ರಮಾಣ)	8	8	8	8	7
ಅರ್ದ್ರತೆ 7.20 ಬೆ (ಶೇ)	92	93	92	93	92
ಅರ್ದ್ರತೆ 2.20 ಮ (ಶೇ)	69	64	62	60	63
ಗಾಳಿಯ ವೇಗ (ಕಿ.ಮಿ/ಗಂಟೆಗೆ)	6	8	6	4	4
ಗಾಳಿಯ ದಿಕ್ಕು (ಡಿಗ್ರಿ)	270	250	230	250	230

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಸಾದಾರಣದಿಂದ ಹೆಚ್ಚು ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶ **28.0–29.0° C** ಮತ್ತು ಕನಿಷ್ಠ **20.0°C** ಇರುವ ಸಾಧ್ಯತೆ ಇದೆ. ಬೆಳಗಿನ ಅರ್ದ್ರತೆ ಪ್ರಮಾಣ ಶೇ **92-93 %** ಇದ್ದು ಮಧ್ಯಾಹ್ನ **60-69 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **4–8** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

- ಹಸ್ತ ಮಳೆಯ ಕಾಲವು ಸೆಪ್ಟೆಂಬರ್ ತಿಂಗಳ 27 ರಿಂದ ಅಕ್ಟೋಬರ್ ತಿಂಗಳ 10 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 132.3 ಮಿ.ಮೀ. ವರೆಗೆ ಮಳೆಯಾಗುತ್ತದೆ.

"ಹಸ್ತಕ್ಕೆ ಹದ ಚಿತ್ತಕ್ಕೆ ಬೆಳೆ! ಹಸ್ತ ಇಟ್ಟು ಇಕ್ಕುತ್ತೆ"

ಬೆಳೆಗಳು	ಹಂತ	ಕೃಷಿ ಸಲಹೆಗಳು
ಮುಂಗಾರು ಬೆಳೆಗಳು	ಬಿತ್ತನೆ , ಬೆಳವಣಿಗೆಯ ಹಂತ, ಕವಲೋಡೆಯುವ ಹಂತ ಮತ್ತು ಹೂವಿನ ಹಂತ	➢ ಪ್ರಸ್ತುತ ಉತ್ತಮ ಮಳೆಯಾಗುತ್ತಿದೆ ಮತ್ತು ಮುಂದಿನ ನಾಲ್ಕೈದು ದಿನಗಳಲ್ಲಿ ಉತ್ತಮ ಮಳೆಯ ಮುನ್ಸೂಚನೆಯಿದೆ ಮತ್ತು ಉತ್ತಮ ತೇವಾಂಶವಿದ್ದು ಬೆಳೆಗಳನ್ನು ಬಿತ್ತನೆ ಮಾಡಲು ಸೂಕ್ತವಾಗಿದೆ ಆದುದರಿಂದ ಕಡಿಮೆ ಅವಧಿಯ ತಳಿಗಳನ್ನು ಬಿತ್ತನೆ ಮಾಡಲು ಆಯ್ಕೆ ಮಾಡಿಕೊಳ್ಳಿ. ➢ ಹಿಂಗಾರು ಬಿತ್ತನೆಗೆ ಭೂಮಿಯನ್ನು ಸಿದ್ದತೆ ಮಾಡಿಕೊಳ್ಳಿ ಮತ್ತು ಬಿತ್ತನೆ ಬೀಜಗಳನ್ನು ಸಿದ್ದತೆ ಮಾಡಿಕೊಳ್ಳಿ. ➢ ಕಳೆದ ಒಂದು ತಿಂಗಳಿನಿಂದ ಉತ್ತಮ ಮಳೆಯಿಂದ ಕಳೆಗಳ ಸಂಖ್ಯೆ ಹೆಚ್ಚಾಗಿ ಬೆಳೆಗಳಲ್ಲಿ ಬೆಳವಣಿಗೆ ಕುಂಠಿತವಾಗುವುದು ಕಂಡು ಬಂದಿದ್ದು ಇದರ ಹತೋಟಿಗೆ ಅಂತರ ಬೇಸಾಯ ಪದ್ದತಿಯನ್ನು ಅನುಸರಿಸಿ ಕಳೆಗಳನ್ನು ನಿರ್ಮೂಲನೆ ಮಾಡಿ. ➢ ಕಡಿಮೆ ಅವಧಿಯ ರಾಗಿ ತಳಿಗಳಾದ ಜಿಪಿಯು- 45, 48 ಮತ್ತು ಇಂಡಾಫ್-9 ತಳಿಗಳನ್ನು ಬಿತ್ತನೆ ಮಾಡಬಹುದು. ➢ ರಾಗಿಯಲ್ಲಿ ಬೆಂಕಿ ರೋಗ ಕಂಡು ಬಂದಲ್ಲಿ ಮ್ಯಾಂಕೊಜೇಬ್ @ 2 ಗ್ರಾಂ/ಲೀ ಅಥವಾ ಜೇನಾಬ್ @ 2.5 ಗ್ರಾಂ/ಲೀ ಸಿಂಪಡಿಸಿ. ➢ ಮೆಕ್ಕೆಜೋಳದ ಬೆಳೆಯಲ್ಲಿ ಅಂತರ ಬೇಸಾಯ ಮಾಡಿ ಕಳೆಗಳನ್ನು ನಿಯಂತ್ರಿಸಬೇಕು ಜೊತೆಗೆ ಸಾಲುಗಳ ಮಧ್ಯದಲ್ಲಿರುವ ಮಣ್ಣನ್ನು ಗಿಡದ ಬುಡಕ್ಕೆ ಹಾಕುವುದರಿಂದ ಭೂಮಿಯು ದಿಂಡು ಸಾಲಾಗಿ ಪರಿವರ್ತನೆಯಾಗುತ್ತದೆ ಇದರಿಂದ ಗಿಡಗಳಿಗೆ ಹೆಚ್ಚು ತೇವಾಂಶ ಸಿಗುವಂತಾಗುತ್ತದೆ. ➢ ತೆನೆ ಹುಳುವಿನ ಬಾಧೆ ಕಂಡು ಬಂದಲ್ಲಿ, ಮೇಲಾಥಿಯಾನ್ @ 2 ಮೀ.ಲಿ/ಲೀ ಸಿಂಪಡಿಸಿ. ➢ ಕಾಂಡಕೊರಕದ ಹುಳುವಿನ ಹತೋಟಿಗೆ ಕ್ವಿನಾಲ್‌ಫಾಸ್-25 ಇ.ಸಿ. ಕೀಟನಾಶಕವನ್ನು 2 ಮಿ.ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. ಅಥವಾ ಕ್ಲೋರೋಪೈರಿಫಾಸ್-20 ಇ.ಸಿ. ಕೀಟನಾಶಕವನ್ನು 2 ಮಿ.ಲೀ/ಪ್ರತಿ ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ. ➢ ತೊಗರಿಯಲ್ಲಿ ಕಾಯಿ ಕೊರಕ ಬಾಧೆ ಕಂಡು ಬಂದಲ್ಲಿ, ಇಂಡಾಕ್ಸಿಕಾರ್ಬ್ 0.5 ಮೀ.ಲಿ/ಲೀ ಅಥವಾ ಸ್ಪೈನೋಸ್ಯಾಡ್ 0.15 ಮೀ.ಲಿ/ಲೀ ಅಥವಾ ಕ್ಲೋರೋಪೈರಿಫಾಸ್ 2 ಮೀ.ಲಿ/ಲೀ ಸಿಂಪಡಿಸಿ

		➢ ಎಲ್ಲೆಲ್ಲಿ ಶಿಫಾರಿಸಿಗಿಂತ ಹೆಚ್ಚು ಗಿಡಗಳ ಸಂಖ್ಯೆ ಇದೆಯೋ ಅಲ್ಲಿ ಬೆಳೆ ಸಸಿಗಳ ಸಂಖ್ಯೆಯನ್ನು ಕಡಿಮೆ ಮಾಡಿ ಗಿಡಗಳ ಸಂಖ್ಯೆ ಕಡಿಮೆ ಇರುವ ಜಾಗದಲ್ಲಿ ನಾಟಿ ಮಾಡಿ.
		ಈ ಕೆಳಗಿನ ತಳಿಗಳನ್ನು ಬಿತ್ತಲು ಸೂಚಿಸಲಾಗಿದೆ: ಜಿ.ಪಿ.ಯು–45 ಮತ್ತು 66, ಇಂಡಾಫ್ 9, ಪಿ.ಆರ್–202, ರಾಗಿ ತಳಿಗಳನ್ನು ಬಿತ್ತನೆ ಮಾಡಬಹುದು. ಶಕ್ತಿಮಾನ್ ಜೋಳದ ತಳಿಗಳಾದ ಡೆಕ್ಕನ್–103, ವಿಜಯ ಕಾಂಪೋಸಿಟ್ ಮತ್ತು ಗಂಗಾ–11 ತಳಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಅಲಸಂದೆ ಬೆಳೆಯಲ್ಲಿ ಕೆ.ಬಿ.ಸಿ–01, ಟಿ.ವಿ.ಎಕ್ಸ್–944 ಮತ್ತು ತರಕಾರಿಗಾಗಿ ಪಿ.ಕೆ.ಬಿ–4 ತಳಿಯನ್ನು ಆಯ್ಕೆ ಮಾಡಿಕೊಳ್ಳಬಹುದು.
ತೋಟಗಾರಿಕಾ ಬೆಳೆಗಳು		
ಮಾವು		➢ ಮಾವಿನ ತೋಟಗಳಲ್ಲಿ ಉತ್ತಮ ಮಳೆಯಾಗಿರುವುದರಿಂದ ಆಳವಾಗಿ ಉಳುಮೆ ಮಾಡಿ ಇದರಿಂದ ವಿವಿದ ಹಂತದ ಕೀಟಗಳು ನಾಶವಾಗುತ್ತವೆ ಮತ್ತು ಮುಂದಿನ ವರ್ಷಗಳಲ್ಲಿ ಕೀಟ ಮತ್ತು ರೋಗಗಳು ಹತೋಟಿಯಾಗುತ್ತವೆ.
ಪಶು ವಿಜ್ಞಾನ		➢ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. ➢ ಜಂತು ಹುಳುಗಳ ನಿವರಣೆಗಾಗಿ ಪಶುವೈದ್ಯರ ಸಲಹೆ ಪಡೆದು ಸೂಕ್ತವಾದ ಜಂತು ನಿವಾರಕ ಔಷದಿಯನ್ನು ಕರು ಹುಟ್ಟಿದ 7ನೆಯ ದಿನ, 1 ನೆಯ ತಿಂಗಳು , 6 ನೆಯ ತಿಂಗಳು ತಪ್ಪದೆ ಹಾಕಬೇಕು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಬೆಂಗಳೂರು

Extended Range Forecast System

Subdivisionwise rainfallforecastmaps for the next 2 weeks (IC - 27September)
(29thSeptemberto 12thOctober 2017)